ಪುಸ್ತಕದ ಹಣ, ಕೆಲವೊಮ್ಮೆ ಶಾಲಾ ಪ್ರವಾಸಕ್ಕೆ ಹೋಗಲು ಕಟ್ಟುವ ಹಣವನ್ನೆಲ್ಲಾ ಡ್ರೈವರ್ ಸಾಯಿಬ್ಬರ ಕೈಯಲ್ಲಿ ಕೊಟ್ಟು ಕಳಿಸುವ ಕ್ರಮ ಇತ್ತು. ಸೋಮವಾರ ಪುತ್ತೂರು ಶಾಲೆಗೆ ಹೋಗುವಾಗ ಫೀಸು ಕಟ್ಟಲು 60 ರುಪಾಯಿ ಇಲ್ಲದಿದ್ದರೆ, ಮಕ್ಕಳಿಗೆ, ಬುಧವಾರ ಡ್ರೈವರ್ ಸಾಯಿಬ್ಬರ ಹತ್ತಿರ ಕೊಟ್ಟು ಕಳಿಸುತ್ತೇನೆ. ಬಸ್ ಸ್ಟಾಂಡಿಗೆ ಬಂದು ತೆಕ್ಕೊಂಡು ಹೋಗು. ನೀನು ಬಾರದಿದ್ದರೆ ಹೊಳ್ಳರ ಅಂಗಡಿಯಲ್ಲಿ ಕೊಡಲು ಹೇಳುತ್ತೇನೆ. ಹೀಗೆಲ್ಲಾ ವಿವರಿಸುವ ಕ್ರಮ ಇತ್ತು. ಪುತ್ತೂರಿನ ಅಂಗಡಿಯಿಂದ ಔಷಧಿ ತರುವುದು, ಇನ್ನೂ ಏನೇನೋ ಸಣ್ಣಪುಟ್ಟದು. ಒಂದು ರೀತಿಯಲ್ಲಿ ಬಸ್ಸು ಹಳ್ಳಿಯ ಜನ ಮತ್ತು ಪೇಟೆ ನಡುವೆ ಕೊಂಡಿಯಾದರೆ, ಸಾಯಿಬ್ಬಣ್ಣ ಅನೇಕ ಸಲ ಪೇಟೆ ಕೆಲಸಕ್ಕೆ ಹಳ್ಳಿ ಜನಗಳ ಪ್ರತಿನಿಧಿ. ಒಂದು ರೀತಿ ಪ್ರೀತಿ ಸೌಹಾರ್ದದ ಜೀವನ.

ಡ್ರೈವರ್ ಸಾಯಿಬ್ಬರ ಬಗ್ಗೆ ಪ್ರೀತಿಗೂ ಹಲವು ಕ್ರಮಗಳುಂಟು. ಹಲಸಿನ ಹಣ್ಣಿನ ಕಾಲದಲ್ಲಿ ಮನೆ, ಹಿತ್ತಿಲು, ತೋಟಗಳಲ್ಲಿ ಹಲಸಿನ ಮರ ಉಳ್ಳವರು ರಸ್ತೆ ಬದಿಗೆ ಒಂದೋ ಎರಡೋ ಹಲಸಿನಕಾಯಿ ತಂದು ಅವರಿಗೆ ಉಡುಗೊರೆ ಕೊಡುವುದು ಒಂದು ಕ್ರಮ. ಕೆಲವರು ಮಾವಿನ ಹಣ್ಣು, ಇನ್ನು ಕೆಲವರು ಬೆಳೆಸಿದ ಗೆಣಸು, ತುಕ್ರ ಪೂಜಾರಿ ಎಂಬವರೊಬ್ಬರು ತರಕಾರಿ, ಇನ್ನು ಕೆಲವರು ಸಣ್ಣ ಬಾಳೆಗೊನೆ ಹೀಗೆಲ್ಲಾ ಕೊಡುವುದಿತ್ತು. ನನ್ನ ಪರಿಚಯದ ಒಬ್ಬರು ರಂಜಾನ್ ಸಮಯದಲ್ಲಿ ಒಂದು ಸೀಸೆಯಲ್ಲಿ ಹಾಕಿ ಸ್ವಲ್ಪ ತುಪ್ಪ ಕೊಟ್ಟು ಕಳುಹಿಸುತ್ತಿದ್ದರು. ಕೆಲವರು ಬಸ್ಸು ಇಳಿಯುವಾಗ ನಾಳೆ ಎರಡು ಹಲಸಿನಕಾಯಿ ತರುವೆ ಎಂದರೆ, ಒಮ್ಮೊಮ್ಮೆ ಸಾಯಿಬ್ಬರು, “ಮನೆಯಲ್ಲಿ ಒಂದು ಇದೆ. ಇನ್ನೊಂದು ನಾಲ್ಕು ದಿನ ಬಿಟ್ಟು ಕೊಡಿ ಆಗದೆ” ಎನ್ನುವುದೂ ಇತ್ತು. ಅವರ ಮನೆಗೆ ಮುಳಿಹುಲ್ಲಿನ ಚಾವಣಿ ಇದ್ದಾಗ ಒಬ್ಬರು ಅವರಿಗೆ ಉಚಿತವಾಗಿ ಮುಳಿ ಹುಲ್ಲು ಕೊಡುವುದೂ ಇತ್ತು ಎಂದು ಕೇಳಿದ್ದೇನೆ.

ಎಲ್ಲಾ ಮೊದಲಿಗೇ ಹೇಳಿದ ಹಾಗೆ ಇದು ಐದು ದಶಕಗಳ ಹಿಂದಿನ ಕತೆ. ನನ್ನ ಹೈಸ್ಕೂಲು ದಿನಗಳಲ್ಲಿ ಆ ಬಸ್ಸಲ್ಲಿ ಆಗಾಗ ಪಯಣಿಸುತ್ತಿದ್ದೆ. ಆಮೇಲೆ ಕಾಲಕ್ರಮೇಣ ಎಲ್ಲಾ ಬದಲಾಯಿತು. ವಯಸ್ಸಾದ ಸಾಯಿಬ್ಬರು ನಿವೃತ್ತರಾದರು. ನಿಧಾನಕ್ಕೆ ಸರಕಾರಿ ಕೆಂಪು ಬಸ್ಸುಗಳ ಸಂಖ್ಯೆ ಹೆಚ್ಚಾಯಿತು. ಅಲ್ಲಿ ಡ್ರೈವರ್ ಹಿಂದೆ ಒಂದು ಕಬ್ಬಿಣದ ಪಟ್ಟಿ ಹಾಕಿ ಪ್ರಯಾಣಿಕರಿಗೆ ಡ್ರೈವರ್ ಕ್ಯಾಬಿನ್‌ಗೆ ಪ್ರವೇಶ ಇಲ್ಲ ಎಂದಾಯಿತು. ಕಂಡಕ್ಟರ್ ಊದುತ್ತಿದ್ದ ಬಿಗಿಲು ಹೋಗಿ ಹಗ್ಗದಲ್ಲಿ ಎಳೆಯುವ ಬೆಲ್ ಬಂತು. ಒಂದೊಂದೇ ಬದಲಾಗಿ ಪ್ರಯಾಣಿಕರಿಗೂ ಬಸ್ಸಿಗೂ ಅದರ ಡ್ರೈವರ್‌ಗಳಿಗೂ ಬಲಿಷ್ಠವಾಗಿದ್ದ ಸಂಬಂಧ ಕಡಿದು ಹೋಯಿತು.

ಆಮೇಲೆ ಇನ್ನಷ್ಟು ಸಮಯ ಸಂದು ರಾತ್ರಿ ಬಸ್ಸಲ್ಲಿ ನಾನು ಊರಿಗೆ ಹೋಗುವಾಗ ಬೆಳಬೆಳಗ್ಗೆ ಖಾದ್ರಿ ಎಂಬವ ಅವನ ಬಾಡಿಗೆ ರಿಕ್ಷಾ ತಂದು ನನ್ನನ್ನು ಸಮೀಪದ ಹಳ್ಳಿಯ ನಮ್ಮ ಮನೆಗೆ ತಲುಪಿಸುತ್ತಿದ್ದ. ಪುನಃ ಬೆಂಗಳೂರಿಗೆ ಹಿಂತಿರುಗುವಾಗ ಅವನೇ ಬಂದು ರಾತ್ರಿ ಬಸ್ಸಿಗೆ ಬಿಟ್ಟುಹೋಗುತ್ತಿದ್ದ. ಈ ಈಚೆಗೆ ನಾನು ಊರಿಗೆ ಹೋದಾಗ ಖಾದ್ರಿಯ ರಿಕ್ಷಾ ಇನ್ನು ಇಲ್ಲ ಎಂದು ತಿಳಿಯಿತು. ಅವನ ಮಕ್ಕಳೆಲ್ಲಾ ಪೇಟೆಗೆ ಫಿಟ್ಟರ್ ಕೆಲಸಕ್ಕೆ ಹೋಗಿದ್ದಾರಂತೆ. ತನಗೂ ವಯಸ್ಸು ಆಯಿತು ಎಂದು ದಾರಿಯಲ್ಲಿ ಕಂಡ ಖಾದ್ರಿ ಹೇಳಿದ. ವಯಸ್ಸಾದರೆ ಕಮ್ಮಿ ಓಡಿಸಿದರೆ ಆಯಿತು ಎಂದೆ. ಅವನು ತುಳುವಿನಲ್ಲಿ ಹೇಳಿದ: ಊರಲ್ಲೆಲ್ಲಾ ಹಿಂದೂಗಳ ರಿಕ್ಷಾದಲ್ಲೆ ಹೋಗಬೇಕೆಂದು ಪ್ರತೀತಿ ಆಗಿದೆ. ತನ್ನ ರಿಕ್ಷಾದಲ್ಲಿ ಮುಸ್ಲಿಮರು ಬರುತ್ತಿದ್ದುದು ಕಮ್ಮಿ. ಸುಮ್ಮನೆ ಇಲ್ಲದ ಗಲಾಟೆ ಯಾಕೆ ಅಂತ ರಿಕ್ಷಾ ಮಾರಿದೆ ಸಾಮಿ. ಊಟಕ್ಕೇನು? ಎಂದೆ. ಸ್ವಲ್ಪ ಮಕ್ಕಳು ಕೊಡುತ್ತಾರೆ. ಅವರಿವರು ಕರೆದರೆ ಡ್ರೈವರ್ ಕೆಲಸ ಮಾಡುತ್ತೇನೆ. ಹೆಂಡತಿ ಎರಡು ಮನೆಗೆ ಅದು ಇದು ಕೆಲಸಕ್ಕೆ ಹೋಗುತ್ತಾಳೆ. ಮೊದಲೂ ಬಡವರ ಮನೆ ಊಟ. ಈಗಲೂ ಅಷ್ಟೆ. ಗಲಾಟೆ ಇಲ್ಲದೆ ನೆಮ್ಮದಿಯಲ್ಲಿ ಜೀವನ ಹೋದರೆ ಸಾಕು ಎಂದ. ಬದಲಾದ್ದು ಬಸ್ಸು ಮಾತ್ರ ಅಲ್ಲ, ಮನುಷ್ಯರ ಮನಸ್ಸು ಕೂಡ ಅನಿಸಿತು. ಸಬ್ಕೋ ಸನ್ಮತಿ ದೇ ಭಗವಾನ್ ಎಂದು ಆಕಾಶಕ್ಕೆ ಕೇಳುವಂತೆ ಅರಚಿ ಹೇಳಬೇಕು ಅನಿಸಿತು. ●